**ದಿನಾಂಕ 24.05.2023 ರಂದು ಸಾಕ್ಷಿಗೆ ಪ್ರಮಾಣ ವಚನವನ್ನು ಬೋಧಿಸಲಾಯಿತು.**

**ಮುಂದುವರೆದ ಪಾಟೀಸವಾಲುಃ ಶ್ರೀ ಕೆ.ಯು. ವಕೀಲರಿಂದಃ**

1. 2 ನೇ ವಾದಿಯ ಜನನ ಪ್ರಮಾಣ ಪತ್ರ ಇಲ್ಲ ಪ್ರಸನ್ನ ಕುಮಾರ್ ಮತ್ತು ಹನುಮಕ್ಕನಿಗೆ 2 ನೇ ವಾದಿಯು ಜನಿಸಿದ್ದಾರೆ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಹನುಮಕ್ಕನನ್ನು ಪ್ರಸನ್ನ ಕುಮಾರ್ ಎಂದಿಗೂ ಮದುವೆಯಾಗಿರಲಿಲ್ಲ ಎಂದರೆ ಸರಿಯಲ್ಲ. 2 ನೇ ವಾದಿಯು ಪ್ರಸನ್ನಕುಮಾರ್ ರವರ ಮಗ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಹನುಮಕ್ಕ ನವರ ಗಂಡನ ಹೆಸರು ತಿಮ್ಮ ಅಲಿಯಾಸ್ ತಿಮ್ಮಾಭೋವಿ ಎಂದು ಗೊತ್ತಿದ್ದರೂ ಸಹ ಅವರ ಗಂಡ ಪ್ರಸನ್ನಕುಮಾರ್ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 2 ನೇ ವಾದಿ ಹನುಮಂತಪ್ಪನವರ ತಂದೆ ತಿಮ್ಮಯ್ಯ ಎಂದು ಗೊತ್ತಿದ್ದರೂ ಸಹ ಉದ್ದೇಶಪೂರ್ವಕವಾಗಿ ಪ್ರಸನ್ನಕುಮಾರ್ ರವರ ಮಗ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ರಂಗನಾಥ ಸ್ವಾಮಿ ದೇವಸ್ಥಾನದಲ್ಲಿ ಹನುಮಕ್ಕ ಮತ್ತು ಪ್ರಸನ್ನಕುಮಾರ್ ರವರಿಗೆ ಮಾಂಗಲ್ಯಧಾರಣೆಯಾಗಿತ್ತು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.
2. ಶಿರಾ ನಗರದಲ್ಲಿ ಹನುಮಕ್ಕ ಮತ್ತು ಪ್ರಸನ್ನಕುಮಾರ್ ರವರು ಕಿರಾಣಿ ಅಂಗಡಿ ನಡೆಸುತ್ತಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 2 ನೇ ವಾದಿ ಹನುಮಂತಪ್ಪ ಎನ್ನುವವರನ್ನು 1 ನೇ ವಾದಿಯ ಸಹೋದರ ತಿಮ್ಮಾಭೋವಿಯವರು ವಿದ್ಯಾಭ್ಯಾಸ ಮಾಡಿಸಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರಸನ್ನಕುಮಾರ್ ರವರು ದಾವಾ ಐಟಂ ನಂ.1 ಮತ್ತು 2 ರಲ್ಲಿ ಬೆಳೆಯನ್ನು ಬೆಳೆದು ಬೇರೆ ಆಸ್ತಿಗಳನ್ನು ಖರೀದಿ ಮಾಡಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರಸನ್ನ ಕುಮಾರ್ ರವರ ಜೊತೆಗೆ ಹನುಮಕ್ಕನವರು ತಾವರೇಕೆರೆಯಲ್ಲಿ 25 ವರ್ಷ ವಾಸವಾಗಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೂ 2 ನೇ ವಾದಿಗೂ ಮೊದಲಿನಿಂದಲೂ ವಿಶ್ವಾಸ ಚೆನ್ನಾಗಿರುವ ಕಾರಣ

ಅವರಿಗೆ ಅನುಕೂಲವಾಗಲಿ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯಪ್ರಮಾಣ ಪತ್ರದಲ್ಲಿ ಇರುವ ವಿಚಾರ ಸುಳ್ಳು ಎಂದರೆ ಸರಿಯಲ್ಲ

ಮರುವಿಚಾರಣೆ ಇಲ್ಲ.

(ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಕಂಪ್ಯೂಟರ್ ಗೊಳಿಸಿ ದಾಖಲಿಸಿ ಪ್ರಿಂಟ್ ತೆಗೆಯಲಾಯಿತು)

**ಓದಿ ಹೇಳಿ ಕೇಳಿ ಸರಿ ಇದೆ,**

**ಹಿರಿಯ ಸಿ.ಜೆ. ಮತ್ತು ಜೆ.ಎಂ.ಎಫ್.ಸಿ, ಶಿರಾ.**